ಓ ಎಸ್.  1/2011 ಪಿಡಬ್ಲ್ಯೂ : 1 ಜಾಫರ್

ದಿನಾಂಕ: 16.01.2024 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ**

**ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ : ಶ್ರೀ ಎನ್ ಎ ವಕೀಲರಿಂದ:**

ಆಂದೋಲನ ಪತ್ರಿಕೆಯಲ್ಲಿ ನೀಡಿದ ಪತ್ರಿಕಾ ಪ್ರಕಟಣೆಯನ್ನು ನಿಪಿ 13 ಎಂದು ಗುರುತಿಸಲಾಗಿದೆ.

**ಮುಂದುವರೆದ ಪಾಟೀ ಸವಾಲು : 3 ನೇ ಪ್ರತಿವಾದಿ ಪರ : ಶ್ರೀ ಎಂ ಡಿ ವಕೀಲರಿಂದ:**

ನನ್ನ ತಂದೆ ಮೈಸೂರಿನಲ್ಲಿ ಓದಿದ್ದು, ಅವರು ಹೈಸ್ಕೂಲ್, ಮ್ಯಾಟ್ರಿಕ್ಯೂಲೇಷನ್ ಮತ್ತು ಡಿಗ್ರಿಯನ್ನು ಮೈಸೂರಿನಲ್ಲೇ ವ್ಯಾಸಾಂಗ ಮಾಡಿರುತ್ತಾರೆ. ನಿಪಿ 11 ಅನ್ನು ನಾನು ನಮ್ಮ ತಂದೆಯ ಸಹಿ

ತೋರಿಸಲು ಹಾಜರುಪಡಿಸಿರುತ್ತೇನೆ. ಮನುಷ್ಯನ ಸಹಿ ವಯಸ್ಸಿನೊಂದಿಗೆ ಬದಲಾಗುತ್ತಾ ಹೋಗುತ್ತದೆ ಎಂದರೆ ಸರಿ. ನಾನು ಮೊದಲು ಸಹಿ ಮಾಡಿದ ಹಾಗೆ ಈಗ ಸಹಿ ಮಾಡಲು ಸಾಧ್ಯವಿಲ್ಲ. ನನಗೆ ವೈಬ್ರೇಷನ್ ಬರುತ್ತದೆ. ನಿಪಿ 11 ರಲ್ಲಿ ನಿಮ್ಮ ತಂದೆ ಸಹಿ ಮಾಡಿದಾಗ ಅವರಿಗೆ ಸುಮಾರು 17-ರಿಂದ 18 ವರ್ಷ ಇರಬಹುದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಓದಿದಾಗ 1 ವರ್ಷ ಪಿಯುಸಿ, 2 ವರ್ಷ ಡಿಗ್ರಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ 13 ಅನ್ನು ನಾನು ಈ ದಾವೆಯನ್ನು ತಡಯಾಜ್ಞೆ ಇತ್ತು ಎಂದು ತೋರಿಸಲು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯನ್ನು ನಾನು ಪತ್ರಿಕೆ ಪ್ರಕಟಣೆ ತೆಗೆದುಕೊಂಡ ನಂತರ ಮಾರಾಟ ಮಾಡಲಾಗಿದೆ. ನಾನು ತಡಯಾಜ್ಞೆಯನ್ನು ಬೇಗಂ ಷಾ ಅವರ ವಿರುದ್ದ ಪಡೆದಿರುತ್ತೇನೆ. ಬೇಗಂ ಷಾ ಅವರಿಗೆ ತಡೆಯಾಜ್ಞೆಯಾದ ಆದೇಶದ ಬಗ್ಗೆ ಕಳುಹಿಸಲಾಗಿತ್ತು.

**ಮರು ವಿಚಾರಣೆ : ಇಲ್ಲ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.